# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಮಧು ಜಿ.ಮಾದೇಗೌಡ (ಪದವೀಧರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 136(1227) |
| ಉತ್ತರಿಸಬೇಕಾದ ದಿನಾಂಕ | 18.03.2025 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ನಗರಸಭೆಗೆ ಸೇರಿದ ಚಿಕ್ಕಮಂಡ್ಯ ಸಮೀಪದ ಕೆ.ಹೆಚ್.ಬಿ. (ಮಹಾರಾಜ ನಗರ) ಬಡಾವಣೆಯ ನಿವಾಸಿಗಳಿಗೆ ನಗರಸಭೆ ವತಿಯಿಂದ ಇದುವರೆವಿಗೂ ಕಾವೇರಿ ಕುಡಿಯುವ ನೀರು ಪೂರೈಸದೆ ಇರುವುದಕ್ಕೆ ಕಾರಣಗಳೇನು; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕರ್ನಾಟಕ ಗೃಹ ಮಂಡಳಿ ವತಿಯಿಂದ ಚಿಕ್ಕಮಂಡ್ಯ ಸಮೀಪದ ಕೆ.ಹೆಚ್.ಬಿ. ಬಡಾವಣೆಯಲ್ಲಿ ಕೊಳವೆ ಬಾವಿಯಿಂದ ನೀರು ಸರಬರಾಜು ವ್ಯವಸ್ಥೆಯನ್ನು 2002-03ರಲ್ಲಿ ಕಲ್ಪಿಸಿದ್ದು, ಗೃಹ ಮಂಡಳಿಯಿಂದ 2019ರಲ್ಲಿ ಬಡಾವಣೆಯನ್ನು ನಗರಸಭೆಗೆ ಹಸ್ತಾಂತರಿಸಿದ್ದು, ಗೃಹ ಮಂಡಳಿಯ ಅಸಮರ್ಪಕ ನಿರ್ವಹಣೆಯಿಂದಾಗಿ ಸದರಿ ಬಡಾವಣೆಗೆ ಕಾವೇರಿ ನೀರು ಪೂರೈಸಿರುವುದಿಲ್ಲ. |
| ಆ) | ಸದರಿ ಬಡಾವಣೆಯು ಕರ್ನಾಟಕ ಹೌಸಿಂಗ್ ಬೋರ್ಡ್ ನಿಂದ ಮಂಡ್ಯ ನಗರಸಭೆಗೆ ಯಾವ ವರ್ಷ ಹಸ್ತಾಂತರಿಸಲಾಯಿತು: ಈ ಬಡಾವಣೆಗೆ ಅಭಿವೃದ್ಧಿಗಾಗಿ ನೀಡಿದ ಹಣ ಎಷ್ಟು: ನಗರಸಭೆ ಈ ಹಣದಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳಾವುವು: | ಸದರಿ ಬಡಾವಣೆಯು ಮಂಡ್ಯ ನಗರಸಭೆಗೆ ಕೆ.ಹೆಚ್.ಬಿ ವತಿಯಿಂದ 2019ರಲ್ಲಿ ಹಸ್ತಾಂತರವಾಗಿರುತ್ತದೆ.<br><br>ಸದರಿ ಬಡಾವಣೆಗೆ ಗೃಹ ಮಂಡಳಿ ವತಿಯಿಂದ ನಗರಸಭೆಗೆ ರೂ.550.00 ಲಕ್ಷಗಳನ್ನು ಪಾವತಿ ಮಾಡಿದ್ದು, ಈ ಅನುದಾನದಲ್ಲಿ ಬಡಾವಣೆಗೆ ಸಂಪರ್ಕ ಕಲ್ಪಿಸಲು ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ರೂ. 446.39 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.<br><br>ಬಡಾವಣೆಯ ನಿರ್ಮಾಣ ವೇಳೆಯಲ್ಲಿ ಗೃಹ ಮಂಡಳಿಯು ಅಳವಡಿಸಿರುವ ನೀರು ಸರಬರಾಜು ಮಾರ್ಗಗಳು ಹಲವು ವರ್ಷ ಬಡಾವಣೆಯಲ್ಲಿ ಯಾವುದೇ ಮನೆ ನಿರ್ಮಾಣವಾಗದ ಕಾರಣ ಬಳಕೆಯಾಗದೇ ಕೆಲವೆಡೆ ದುರಸ್ಥಿಯಲ್ಲಿರುವುದರಿಂದ ಉಳಿಕೆಯಾದ ರೂ. 103.65 ಲಕ್ಷಗಳನ್ನು ಬಡಾವಣೆಯಲ್ಲಿನ ನೀರು ಸರಬರಾಜು ವ್ಯವಸ್ಥೆ ಮತ್ತು ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ರೂಪಿಸಿ ಆದ್ಯತೆಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಇ) | ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಈ ಬಡಾವಣೆಯಲ್ಲಿ ಈವರೆವಿಗೂ ಆಗಿರುವ ಕೆಲಸಗಳು ಯಾವುವು: ಇದಕ್ಕೆ ಭರಿಸಲಾಗಿರುವ ವೆಚ್ಚ ಎಷ್ಟು: (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು) | ಸದರಿ ಬಡಾವಣೆಗೆ ಕಾವೇರಿ ಸಗಟು ನೀರು ಸರಬರಾಜು ಮಾಡಲು 2012ನೇ ಸಾಲಿನಲ್ಲಿ ವಂತಿಕೆ ಮೊತ್ತ ರೂ.93.59 ಲಕ್ಷಗಳನ್ನು ಗೃಹಮಂಡಳಿ ವತಿಯಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಗೆ ಭರಿಸಲಾಗಿರುತ್ತದೆ. ಹಾಲಿ ಇರುವ ಮೇಲ್ಮಟ್ಟ ಜಲ ಸಂಗ್ರಹಗಾರವನ್ನು ಹೊಳಲು ಸರ್ಕಲ್‌ನಿಂದ ಕೆ.ಹೆಚ್.ಬಿ. ಬಡಾವಣೆವರೆವಿಗೂ ಅಳವಡಿಸಲಾಗಿದ್ದ 200 ಮಿ.ಮೀ. ವ್ಯಾಸದ ಫೀಡರ್ ಕೊಳವೆ ಮಾರ್ಗವನ್ನು ಹಾಗೂ ಪಂಪು ರೇಚಕಗಳನ್ನು ದುರಸ್ಥಿಪಡಿಸಲು ರೂ.16.35 ಲಕ್ಷಗಳನ್ನು ಗೃಹಮಂಡಳಿ ವತಿಯಿಂದ ಮಂಡಳಿಗೆ ಭರಿಸಿದ್ದರಿಂದ ಮಂಡಳಿ ವತಿಯಿಂದ ದುರಸ್ಥಿ ಕಾಮಗಾರಿಯನ್ನು ಕೈಗೊಂಡು ಕಾವೇರಿ ಕುಡಿಯುವ ನೀರನ್ನು ಮೇಲ್ಮಟ್ಟ ಜಲಸಂಗ್ರಹಗಾರಕ್ಕೆ ತುಂಬಿಸಿ ಚಾಲನೆಗೊಳಿಸಿ ಗೃಹಮಂಡಳಿಗೆ ಹಸ್ತಾಂತರಿಸಲಾಗಿರುತ್ತದೆ. |
| ಈ) | ಈ ಬಡಾವಣೆಯಲ್ಲಿ ಇರುವ ಒಟ್ಟು ನಿವೇಶನಗಳ ಪೈಕಿ ಎಷ್ಟು ನಿವೇಶನಗಳಲ್ಲಿ ಮನೆಗಳ ನಿರ್ಮಾಣ ಆಗಿದೆ: ಇಲ್ಲಿನ ಜನಸಂಖ್ಯೆ ಎಷ್ಟು: | ಈ ಬಡಾವಣೆಯಲ್ಲಿ ಒಟ್ಟು 1464 ನಿವೇಶನಗಳಿದ್ದು, ಅದರಲ್ಲಿ 234 ಮನೆಗಳು ನಿರ್ಮಾಣವಾಗಿರುತ್ತವೆ. ಸದರಿ ಬಡಾವಣೆಯಲ್ಲಿ ಒಟ್ಟು 1248 ಜನಸಂಖ್ಯೆ ಇರುತ್ತದೆ. |
| ಉ) | ಪ್ರಸ್ತುತ ಸದರಿ ಬಡಾವಣೆಯ ಜನರು ಉಪಯೋಗಿಸುತ್ತಿರುವ ನೀರು ಕಲುಷಿತವಾಗಿದ್ದು ಕುಡಿಯಲು ಯೋಗ್ಯವಾಗಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಜನರು ಬಳಸುತ್ತಿರುವ ನೀರಿನ ಗುಣಮಟ್ಟ ಕುರಿತು ಪರೀಕ್ಷಿಸಲಾಗಿದೆಯೇ? | ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಕ್ರಮವಹಿಸಲಾಗಿರುತ್ತದೆ. |
| ಊ) | ಸದರಿ ಬಡಾವಣೆಗೆ ಕುಡಿಯುವ ನೀರು ಪೂರೈಸಲು ತೆಗೆದುಕೊಂಡಿರುವ ಪರ್ಯಾಯ ಕ್ರಮಗಳೇನು: ಯಾವ ಕಾಲಮಿತಿಯೊಳಗೆ ನೀರು ಒದಗಿಸಲು ಸರ್ಕಾರ ಕ್ರಮವಹಿಸಲಿದೆ: (ಸಂಪೂರ್ಣ ವಿವರ ನೀಡುವುದು) | ಹಲವು ವರ್ಷಗಳಿಂದ ನೀರು ಸರಬರಾಜು ವಿತರಣಾ ಕೊಳವೆ ಮಾರ್ಗಗಳನ್ನು ಬಳಸದೆ ಇದ್ದ ಕಾರಣ ಕೊಳವೆಗಳು ಹಾಳಾಗಿರುವ ಮಾಹಿತಿಯನ್ನು ಗೃಹಮಂಡಳಿ ಹಾಗೂ ಮಂಡ್ಯ, ನಗರಸಭೆ ರವರಿಗೆ ತಿಳಿಸಿ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವತಿಯಿಂದ 2021-22ರ ದರಪಟ್ಟಿಯಂತೆ ರೂ.64.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ:12.08.2022 ರಲ್ಲಿ |
| ಋ) | ಹೊಸದಾಗಿ ಪೈಪ್ ಲೈನ್ ಅಳವಡಿಸಿ, ಕಾವೇರಿ ನೀರು ಪೂರೈಸುವ ಸಂಬಂಧ ಯಾವುದಾದರೂ ಪ್ರಸ್ತಾವನೆಗಳು | |

| | | |
|---|---|---|
| | ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆಯೇ? (ಇದ್ದಲ್ಲಿ, ಈ ಬಗ್ಗೆ ವಿವರ ನೀಡುವುದು) | ಪೌರಾಯುಕ್ತರು, ಮಂಡ್ಯ, ನಗರಸಭೆ ರವರಿಗೆ ಸಲ್ಲಿಸಲಾಗಿರುತ್ತದೆ. ನಗರಸಭೆ ವತಿಯಿಂದ ಸದರಿ ಅಂದಾಜು ಮೊತ್ತವನ್ನು ಮಂಡಳಿಗೆ ಭರಿಸದಿರುವುದರಿಂದ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.<br><br>ಮುಂದುವರೆದು ಕೆ.ಹೆಚ್.ಬಿ. ಬಡಾವಣೆಯಲ್ಲಿ ಹೊಸದಾಗಿ ವಿತರಣಾ ಕೊಳವೆ ಮಾರ್ಗಗಳನ್ನು ಅಳವಡಿಸಲು ಸರ್ವೆ ಕಾರ್ಯ ಕೈಗೊಂಡು ಹಾಲಿ ಇರುವ OHT ಯನ್ನು ಪುನರುಜ್ಜೀವನಗೊಳಿಸಿ ಕಾವೇರಿ ನೀರನ್ನು ಪೂರೈಸಲು ಅಗತ್ಯ ಇರುವ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವತಿಯಿಂದ ರೂ.350.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ:18.06.2024 ರಂದು ಪೌರಾಯುಕ್ತರು, ಮಂಡ್ಯ, ನಗರಸಭೆ ರವರಿಗೆ ಕಳುಹಿಸಲಾಗಿರುತ್ತದೆ. |

ಸಂಖ್ಯೆ: ನಅಇ 40 ಯುಎಂಎಸ್ 2025

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು